# ಲಸಿಕೆ ಹಾಕಿಸಲು ತಡಮಾಡದಿರಿ!

**PREVENT GLOBAL HPV CANCERS**

**ಇಂದೇ ಮಗಳಿಗೆ ಲಸಿಕೆ ಹಾಕಿಸಿ. ಗರ್ಭಕಂಠದ ಕ್ಯಾನ್ಸರ್‌ನಿಂದ ಆಕೆಯ ಭವಿಷ್ಯವನ್ನು ರಕ್ಷಿಸಿ.**



ಗರ್ಭಕಂಠದ ಕ್ಯಾನ್ಸರ್ ಪ್ರಾಥಮಿಕವಾಗಿ HPV ಸೋಂಕಿನಿಂದ ಉಂಟಾಗುತ್ತದೆ. HPV ಸೋಂಕು ತುಂಬಾ ಸಾಮಾನ್ಯವಾಗಿದೆ. **ಬಹುತೇಕ ಪ್ರತಿಯೊಬ್ಬರೂ** ತಮ್ಮ ಜೀವಿತಾವಧಿಯಲ್ಲಿ HPV ಸೋಂಕಿಗೆ ಒಳಗಾಗುತ್ತಾರೆ. HPV ಲಸಿಕೆಯು ಗರ್ಭಕಂಠದ ಕ್ಯಾನ್ಸರ್‌ಗೆ ಕಾರಣವಾಗುವ HPV ಸೋಂಕನ್ನು **ತಡೆಯಲು** ಸಹಾಯ ಮಾಡುತ್ತದೆ.

## ವಯಸ್ಸು ಮುಖ್ಯವಾಗುತ್ತದೆ

ಶಿಫಾರಸ್ಸು ಮಾಡಲಾದ ವಯಸ್ಸಿನಲ್ಲಿ ಲಸಿಕೆ ಹಾಕುವುದರಿಂದ,
ವಯಸ್ಸಾದ ನಂತರ ಲಸಿಕೆ ಹಾಕಿಸುವುದಕ್ಕಿಂತ ಹೆಚ್ಚಿನ ಕ್ಯಾನ್ಸರ್‌ಗಳನ್ನು ತಡೆಯುತ್ತದೆ.

**ಲಸಿಕೆ ಹಾಕಿಸಲು ಸೂಕ್ತ ಸಮಯ**

9 - 14 ವಯಸ್ಸು



**ತಡವಾಗಿ/ ಹೆಚ್ಚುವರಿ ಲಸಿಕೆ**

15 ವರ್ಷಕ್ಕೆ ಮೇಲ್ಪಟ್ಟು



ಗರ್ಭಕಂಠದ ಕ್ಯಾನ್ಸರ್ ಮತ್ತು ಇತರ HPV ಕ್ಯಾನ್ಸರ್‌ಗಳನ್ನು ಮುಂದಿನ ದಿನಗಳಲ್ಲಿ ತಡೆಗಟ್ಟಲು, **9 ರಿಂದ 14** ವರ್ಷಗಳ ಹೆಣ್ಣುಮಕ್ಕಳು HPV ವಿರುದ್ಧದ ಲಸಿಕೆಯನ್ನು ಪಡೆಯಬೇಕೆಂದು ವೈದ್ಯರು ಶಿಫಾರಸ್ಸು ಮಾಡುತ್ತಾರೆ.

## ಇಂದೇ ನಿಮ್ಮ ವೈದ್ಯರನ್ನು ಸಂಪರ್ಕಿಸಿ!



14 ನೇ ವಯಸ್ಸಿಗೆ ಸರಿಯಾಗಿ ನಿಮ್ಮ ಮಗಳಿಗೆ ಲಸಿಕೆ ಹಾಕಿದಾಗ, ನೀವು ಗರ್ಭಕಂಠದ ಕ್ಯಾನ್ಸರ್ ಸೇರಿದಂತೆ ಹೆಚ್ಚಿನ HPV ಕ್ಯಾನ್ಸರ್‌ಗಳಿಂದ ಅವಳನ್ನು ರಕ್ಷಿಸಬಹುದು

**HPV ಲಸಿಕೆ ಹಾಕಿದ ದಿನಾಂಕ** ______________________________

# ಪ್ರಶ್ನೆಗಳು ಮತ್ತು ಉತ್ತರಗಳು

PREVENT GLOBAL HPV CANCERS

## 9 ರಿಂದ 14 ವರ್ಷ ವಯಸ್ಸಿನ ನಡುವೆ ಏಕೆ ಲಸಿಕೆ ಹಾಕಬೇಕು?

9 ಮತ್ತು 14 ವಯಸ್ಸಿನ ನಡುವೆ HPV ಲಸಿಕೆ ನೀಡಿದಾಗ, ಅದು ಉತ್ತಮವಾಗಿ ಕಾರ್ಯನಿರ್ವಹಿಸುತ್ತದೆ. ಏಕೆಂದರೆ ಕಿರಿಯ ವಯಸ್ಸಿನಲ್ಲಿ ಲಸಿಕೆಯನ್ನು ನೀಡಿದಾಗ ಮಕ್ಕಳು ಸೋಂಕಿನ ವಿರುದ್ಧ ಬಲವಾದ ರಕ್ಷಣೆಯನ್ನು ಅಭಿವೃದ್ಧಿಪಡಿಸಿಕೊಳ್ಳುತ್ತಾರೆ. ಹೆಚ್ಚಿನ ವಯಸ್ಸಿನಲ್ಲಿ ತಡವಾಗಿ ಲಸಿಕೆ ಹಾಕುವುದಕ್ಕಿಂತ ಸಮಯಕ್ಕೆ ಸರಿಯಾಗಿ ಲಸಿಕೆ ಹಾಕುವಿಕೆಯು HPV ಕ್ಯಾನ್ಸರ್‌ಗಳಿಂದ ಹೆಚ್ಚಿನ ರಕ್ಷಣೆ ನೀಡುತ್ತದೆ ಎಂದು ಸಂಶೋಧನೆ ತೋರಿಸುತ್ತದೆ.

## ನನ್ನ ಮಗಳಿಗೆ 14 ವರ್ಷ, ನಾನು ಏನು ಮಾಡಬೇಕು?

HPV ಲಸಿಕೆಯನ್ನು ಹುಡುಗಿಯ 15ನೇ ವಯಸ್ಸಿನ ಮೊದಲು ನೀಡಿದಾಗ ಉತ್ತಮವಾಗಿ ಕಾರ್ಯನಿರ್ವಹಿಸುತ್ತದೆ. ಆದರೆ ಇದು ಇನ್ನೂ ಹೆಚ್ಚಿನ ವಯಸ್ಸಿನಲ್ಲಿ ಸ್ವಲ್ಪ ಮಟ್ಟಿನ ರಕ್ಷಣೆ ನೀಡುತ್ತದೆ. 15 ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಹುಡುಗಿಯರಿಗೆ ಲಸಿಕೆ ಹಾಕುವುದು ಅಷ್ಟೇ ಸುರಕ್ಷಿತವಾಗಿರುತ್ತದೆ, ಆದರೂ ಅವರಿಗೆ ಲಸಿಕೆಯ ಹೆಚ್ಚುವರಿ ಡೋಸ್ ಅಗತ್ಯವಿರುತ್ತದೆ.

## ಲಸಿಕೆಯಿಂದ ಅಡ್ಡಪರಿಣಾಮಗಳಿವೆಯೇ?

HPV ಲಸಿಕೆ ತುಂಬಾ ಸುರಕ್ಷಿತವಾಗಿದೆ. ಇತರ ಚುಚ್ಚುಮದ್ದು ಲಸಿಕೆಗಳಂತೆ, HPV ವ್ಯಾಕ್ಸಿನೇಷನ್‌ನಿಂದ ಸಾಮಾನ್ಯ ಅಡ್ಡಪರಿಣಾಮಗಳು ಸೌಮ್ಯವಾಗಿರುತ್ತವೆ ಮತ್ತು ಇವುಗಳನ್ನು ಒಳಗೊಂಡಿರಬಹುದು: ಜ್ವರ, ತಲೆನೋವು, ನೋವು ಮತ್ತು ಚುಚ್ಚುಮದ್ದು ನೀಡಿದ ತೋಳಿನಲ್ಲಿ ಕೆಂಪಗಾಗುವುದು . ಚುಚ್ಚುಮದ್ದಿನ ನಂತರ ಅಪರೂಪವಾಗಿ ಮಕ್ಕಳು ಮೂರ್ಛೆ ಹೋಗಬಹುದು ಮತ್ತು ಅವರು ಬಿದ್ದು ಗಾಯಗೊಳ್ಳಬಹುದು. ಲಸಿಕೆ ಹಾಕಿದ ನಂತರ ನಿಮ್ಮ ಮಗು ಬೀಳುವುದನ್ನು ತಪ್ಪಿಸಲು ಸುಮಾರು 15 ನಿಮಿಷಗಳ ಕಾಲ ಕುಳಿತುಕೊಳ್ಳಬೇಕಾಗುವುದು.

**HPV ಲಸಿಕೆಯ ದರ ಮತ್ತು ಸ್ಥಳಕ್ಕಾಗಿ,**
**ನಿಮ್ಮ ಹತ್ತಿರದ ಕ್ಲಿನಿಕ್ ಅಥವಾ ಆಸ್ಪತ್ರೆಯನ್ನು ಸಂಪರ್ಕಿಸಿ**

Prevent Global HPV Cancers is a collaborative initiative supported by the American Cancer Society's Global HPV Cancer Free program
Last revision Feb 2024